# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು

ಸಂಖ್ಯೆ:ಕರಾಸಾ/ಕೇಕ/ಶಿಸ್ತು/ಡಿ-3/ಡಿ-1975/ 221 /2022-23 ದಿನಾಂಕ: 17/20 -06-2022

## ಆಪಾದನಾ ಪತ್ರ

ವಿ. ಅನ್ಬುಕುಮಾರ್, ಭಾ.ಆ.ಸೇ, ವ್ಯವಸ್ಥಾಪಕ ನಿರ್ದೇಶಕ/ಶಿಸ್ತುಪಾಲನಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ಆದ ನನ್ನ ಸಮಕ್ಷಮದಲ್ಲಿ ಶ್ರೀಮತಿ. ರಮ್ಯ.ಸಿ.ಕೆ, ಸಹಾಯಕ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ಸಂಸ್ಥೆ, ಬೆಂಗಳೂರು ಕೇಂದ್ರೀಯ ವಿಭಾಗ ರವರು ಸಲ್ಲಿಸಿರುವ ವರದಿ ಹಾಗೂ ನನ್ನ ಮುಂದೆ ಹಾಜರುಪಡಿಸಲಾದ ದಾಖಲೆಗಳ ಅನುಸಾರ ಶ್ರೀ ಬಿ.ಸಿ ನಿರಂಜನ, ಅಂದಿನ ವಿಭಾಗೀಯ ಸಂಚಾರ ಅಧಿಕಾರಿ, ಕೋಲಾರ ವಿಭಾಗ, ಪ್ರಸ್ತುತ ವಿಭಾಗೀಯ ನಿಯಂತ್ರಣಾಧಿಕಾರಿ, ಕೋಲಾರ ವಿಭಾಗ, ಶ್ರೀ ಎಂ.ಬಿ.ಜೈಶಾಂತ್ ಕುಮಾರ್, ವಿಭಾಗೀಯ ಸಂಚಾರ ಅಧಿಕಾರಿ, ಕರಾರಸಾ ಸಂಸ್ಥೆ, ಕೋಲಾರ ವಿಭಾಗ ಮತ್ತು ಶ್ರೀ ಎಂ.ವೀರಭದ್ರಪ್ಪ, ಅಂದಿನ ಕಾನೂನು ಅಧಿಕಾರಿ/ವಿಭಾಗೀಯ ಸಂಚಾರ ಅಧಿಕಾರಿ(ಹೆಚ್ಚುವರಿ), ಕೋಲಾರ ವಿಭಾಗ, ಪ್ರಸ್ತುತ ಉಪ ಮುಖ್ಯ ಕಾನೂನು ಅಧಿಕಾರಿ, ವಾಕರಸಾ ಸಂಸ್ಥೆ, ಕೇಂದ್ರ ಕಚೇರಿ, ಹುಬ್ಬಳ್ಳಿ ಇವರ ವಿರುದ್ಧ ಮಾಡಲಾಗಿರುವ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಸಾಕಷ್ಟು ಸಾಕ್ಷ್ಯಾಧಾರಗಳು ಇರುವುದು ದೃಢಪಟ್ಟಿರುತ್ತದೆ. ಆದುದರಿಂದ, ಕರಾರಸಾಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿ-1971ರ ನಿಯಮ 19(2) ಮತ್ತು ಅದರ ಜೊತೆ ಓದಲಾಗುವ ನಿಯಮ-23 ರಡಿಯಲ್ಲಿ ದತ್ತವಾಗಿರುವ ಅಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ ದುರ್ನಡತೆಗಳನ್ನು ಎಸಗಿರುವುದಾಗಿ ಆರೋಪಿಸುತ್ತೇನೆ:-

**ಶ್ರೀ ಬಿ.ಸಿ ನಿರಂಜನ, ಅಂದಿನ ವಿಭಾಗೀಯ ಸಂಚಾರ ಅಧಿಕಾರಿ, ಕೋಲಾರ ವಿಭಾಗ ಇವರ ವಿರುದ್ಧ ಹೊರಿಸಿರುವ ಆರೋಪಗಳು:-**

1. ನೀವು ಈ ಹಿಂದೆ ಕರಾರಸಾ ಸಂಸ್ಥೆ, ಕೋಲಾರ ವಿಭಾಗದಲ್ಲಿ ವಿಭಾಗೀಯ ಸಂಚಾರ ಅಧಿಕಾರಿ ಹುದ್ದೆಯಲ್ಲಿ ದಿನಾಂಕ:01-2-2018 ರಿಂದ 4-9-2019 ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಗೆ ಸಂಬಂಧಿಸಿದಂತೆ, ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017-18 ದಿನಾಂಕ:25-01-2018ರಲ್ಲಿನ ನಿರ್ದೇಶನಗಳನ್ವಯ ವಿಭಾಗದಲ್ಲಿ ಅಂತರ ರಾಜ್ಯ ಮಾರ್ಗಗಳಲ್ಲಿರುವ ಸ್ಥಳಗಳಿಗೆ ಇಟಿಎಂ ತಂತ್ರಾಂಶದಲ್ಲಿ ಅಗತ್ಯ ನಿಗದಿತ ಹಂತದ ದರವನ್ನು ನಿಗದಿಪಡಿಸಲು ಹಾಗೂ ಸದರಿ ಸಾಮಾನ್ಯ ಸ್ಥಾಯಿ ಆದೇಶದಲ್ಲಿನ ಬದಲಾವಣೆಗಳನ್ನು ಇ.ಟಿ.ಎಂ ತಂತ್ರಾಂಶದಲ್ಲಿ ಅಳವಡಿಸಲು/ಮಾರ್ಪಾಡು ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ವಿಫಲರಾಗಿರುತ್ತೀರಿ ಹಾಗೂ ಮಾರ್ಗ ಮತ್ತು ದರಗಳ ಸಂಬಂಧಿತ ಮಾಹಿತಿಯನ್ನು ಘಟಕಗಳಿಗೆ ಒದಗಿಸಲು ಮತ್ತು ಇಟಿಎಂಗಳಲ್ಲಿ ಸದರಿ ಮಾಹಿತಿ ಪರಿಷ್ಕರಣೆಯಾಗಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಪರಿಷ್ಕೃತ ಲಗೇಜು ದರಗಳನ್ನು ಅಳವಡಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲನೆ/ಮರು ಪರಿಶೀಲನೆ ಮಾಡಲು ಹಾಗೂ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ವಿಫಲರಾಗಿ ಸುತ್ತೋಲೆ ಸಂಖ್ಯೆ 1/2013 ದಿ:5-4-2013, ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017-18 ದಿನಾಂಕ:25-01-2018ರಲ್ಲಿನ ನಿರ್ದೇಶನಗಳನ್ನು ಉಲ್ಲಂಘಿಸಿ ತನ್ಮೂಲಕ ನಿಗಮಕ್ಕೆ ರೂ.4,50,297/- ರಷ್ಟು ಆರ್ಥಿಕ ನಷ್ಟವುಂಟಾಗಲು ನೇರವಾಗಿ ಜವಾಬ್ದಾರರಾಗಿರುತ್ತೀರಿ.

2. ನೀವು ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಮೇಲಿನಂತೆ ನ್ಯೂನತೆಗಳನ್ನು ಎಸಗಿ ಕರ್ತವ್ಯದಲ್ಲಿ ನಿಷ್ಠೆಯನ್ನು ಕಾಪಾಡಲು ವಿಫಲರಾಗಿ, ಸಂಸ್ಥೆಯ ನೌಕರರಿಗೆ

ತರವಲ್ಲದ ಕೃತ್ಯವನ್ನೆಸಗಿ ಕರಾರಸಾ ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971ರ ನಿಯಮಾವಳಿ 3 (1) ರ (ii) ಮತ್ತು (iii) ನ್ನು ಉಲ್ಲಂಘಿಸಿರುತ್ತೀರಿ.

**ಶ್ರೀ ಎಂ ವೀರಭದ್ರಪ್ಪ, ಅಂದಿನ ಕಾನೂನು ಅಧಿಕಾರಿ/ ವಿಭಾಗೀಯ ಸಂಚಾರ ಅಧಿಕಾರಿ(ಹೆಚ್ಚುವರಿ), ಕೋಲಾರ ವಿಭಾಗ ಇವರ ವಿರುದ್ಧ ಹೊರಿಸಿರುವ ಆರೋಪಗಳು:-**

1. ನೀವು ಈ ಹಿಂದೆ ಕರಾರಸಾ ಸಂಸ್ಥೆ, ಕೋಲಾರ ವಿಭಾಗದಲ್ಲಿ ವಿಭಾಗೀಯ ಸಂಚಾರ ಅಧಿಕಾರಿ(ಹೆಚ್ಚುವರಿ) ಹುದ್ದೆಯಲ್ಲಿ ದಿನಾಂಕ:4-9-2019 ರಿಂದ 24-9-2019 ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಗೆ ಸಂಬಂಧಿಸಿದಂತೆ, ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017-18 ದಿನಾಂಕ:25-01-2018ರಲ್ಲಿನ ನಿರ್ದೇಶನಗಳನ್ವಯ ವಿಭಾಗದಲ್ಲಿ ಅಂತರ ರಾಜ್ಯ ಮಾರ್ಗಗಳಲ್ಲಿರುವ ಸ್ಥಳಗಳಿಗೆ ಇಟಿಎಂ ತಂತ್ರಾಂಶದಲ್ಲಿ ಅಗತ್ಯ ನಿಗದಿತ ಹಂತದ ದರವನ್ನು ನಿಗದಿಪಡಿಸಲು ಹಾಗೂ ಸದರಿ ಸಾಮಾನ್ಯ ಸ್ಥಾಯಿ ಆದೇಶದಲ್ಲಿನ ಬದಲಾವಣೆಗಳನ್ನು ಇ.ಟಿ.ಎಂ ತಂತ್ರಾಂಶದಲ್ಲಿ ಅಳವಡಿಸಲು/ಮಾರ್ಪಾಡು ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ವಿಫಲರಾಗಿರುತ್ತೀರಿ ಹಾಗೂ ಮಾರ್ಗ ಮತ್ತು ದರಗಳ ಸಂಬಂಧಿತ ಮಾಹಿತಿಯನ್ನು ಘಟಕಗಳಿಗೆ ಒದಗಿಸಲು ಮತ್ತು ಇಟಿಎಂಗಳಲ್ಲಿ ಸದರಿ ಮಾಹಿತಿ ಪರಿಷ್ಕರಣೆಯಾಗಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಪರಿಷ್ಕೃತ ಲಗೇಜು ದರಗಳನ್ನು ಅಳವಡಿಸಲಾಗಿದಯೇ ಎಂಬ ಪರಿಶೀಲನೆ/ಮರು ಪರಿಶೀಲನೆ ಮಾಡಲು ಹಾಗೂ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ವಿಫಲರಾಗಿ ಸುತ್ತೋಲೆ ಸಂಖ್ಯೆ:1/2013 ದಿನಾಂಕ:5-4-2013, ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017-18 ದಿನಾಂಕ:25-01-2018ರಲ್ಲಿನ ನಿರ್ದೇಶನಗಳನ್ನು ಉಲ್ಲಂಘಿಸಿ ತನ್ಮೂಲಕ ನಿಗಮಕ್ಕೆ ರೂ.1,51,792/- ರಷ್ಟು ಆರ್ಥಿಕ ನಷ್ಟವುಂಟಾಗಲು ನೇರವಾಗಿ ಜವಾಬ್ದಾರರಾಗಿರುತ್ತೀರಿ.
2. ನೀವು ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಮೇಲಿನಂತೆ ನ್ಯೂನತೆಗಳನ್ನು ಎಸಗಿ ಕರ್ತವ್ಯದಲ್ಲಿ ನಿಷ್ಠೆಯನ್ನು ಕಾಪಾಡಲು ವಿಫಲರಾಗಿ, ಸಂಸ್ಥೆಯ ನೌಕರರಿಗೆ ತರವಲ್ಲದ ಕೃತ್ಯವನ್ನೆಸಗಿ ಕರಾರಸಾ ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971ರ ನಿಯಮಾವಳಿ 3 (1) ರ (ii) ಮತ್ತು (iii) ನ್ನು ಉಲ್ಲಂಘಿಸಿರುತ್ತೀರಿ.

**ಶ್ರೀ ಎಂ.ಬಿ.ಜೈಶಾಂತ್ ಕುಮಾರ್, ವಿಭಾಗೀಯ ಸಂಚಾರ ಅಧಿಕಾರಿ, ಕೋಲಾರ ವಿಭಾಗ ಇವರ ವಿರುದ್ಧ ಹೊರಿಸಿರುವ ಆರೋಪಗಳು:-**

1. ದಿನಾಂಕ:25-10-2020 ರಿಂದ 12-11-2021 ರವರೆಗಿನ ನಿಮ್ಮ ಕರ್ತವ್ಯಾವಧಿಗೆ ಸಂಬಂಧಿಸಿದಂತೆ, ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017-18 ದಿನಾಂಕ:25-01-2018ರಲ್ಲಿನ ನಿರ್ದೇಶನಗಳನ್ವಯ ವಿಭಾಗದಲ್ಲಿ ಅಂತರ ರಾಜ್ಯ ಮಾರ್ಗಗಳಲ್ಲಿರುವ ಸ್ಥಳಗಳಿಗೆ ಇಟಿಎಂ ತಂತ್ರಾಂಶದಲ್ಲಿ ಅಗತ್ಯ ನಿಗಧಿತ ಹಂತದ ದರವನ್ನು ನಿಗದಿಪಡಿಸಲು ಹಾಗೂ ಸದರಿ ಸಾಮಾನ್ಯ ಸ್ಥಾಯಿ ಆದೇಶದಲ್ಲಿನ ಬದಲಾವಣೆಗಳನ್ನು ಇ.ಟಿ.ಎಂ ತಂತ್ರಾಂಶದಲ್ಲಿ ಅಳವಡಿಸಲು/ಮಾರ್ಪಾಡು ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ವಿಫಲರಾಗಿರುತ್ತೀರಿ ಹಾಗೂ ಮಾರ್ಗ ಮತ್ತು ದರಗಳ ಸಂಬಂಧಿತ ಮಾಹಿತಿಯನ್ನು ಘಟಕಗಳಿಗೆ ಒದಗಿಸಲು ಮತ್ತು ಇಟಿಎಂಗಳಲ್ಲಿ ಸದರಿ ಮಾಹಿತಿ ಪರಿಷ್ಕರಣೆಯಾಗಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಪರಿಷ್ಕೃತ ಲಗೇಜು ದರಗಳನ್ನು ಅಳವಡಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲನೆ/ಮರು ಪರಿಶೀಲನೆ ಮಾಡಲು ಹಾಗೂ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ವಿಫಲರಾಗಿ ಸುತ್ತೋಲೆ ಸಂಖ್ಯೆ:1/2013 ದಿನಾಂಕ:5-4-2013, ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017-18 ದಿನಾಂಕ:25-01-2018 ಮತ್ತು ಸುತ್ತೋಲೆ ಸಂಖ್ಯೆ:1/2020

ದಿನಾಂಕ:2/11/2020 ರಲ್ಲಿನ ನಿರ್ದೇಶನಗಳನ್ನು ಉಲ್ಲಂಘಿಸಿ ತನ್ಮೂಲಕ ನಿಗಮಕ್ಕೆ ರೂ.2,74,483/- ರಷ್ಟು ಆರ್ಥಿಕ ನಷ್ಟವುಂಟಾಗಲು ನೇರವಾಗಿ ಜವಾಬ್ದಾರರಾಗಿರುತ್ತೀರಿ.

2. ನೀವು ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಮೇಲಿನಂತೆ ನ್ಯೂನತೆಗಳನ್ನು ಎಸಗಿ ಕರ್ತವ್ಯದಲ್ಲಿ ನಿಷ್ಠೆಯನ್ನು ಕಾಪಾಡಲು ವಿಫಲರಾಗಿ, ಸಂಸ್ಥೆಯ ನೌಕರರಿಗೆ ತರವಲ್ಲದ ಕೃತ್ಯವನ್ನೆಸಗಿ ಕರಾರಸಾ ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971ರ ನಿಯಮಾವಳಿ 3 (1) ರ (ii) ಮತ್ತು (iii) ನ್ನು ಉಲ್ಲಂಘಿಸಿರುತ್ತೀರಿ.

**ಆರೋಪಗಳ ವಿವರ:-** ಆಪಾದಿತರ ಮೇಲೆ ಹೊರಿಸಲಾಗಿರುವ ಆರೋಪಗಳು ಶ್ರೀಮತಿ. ರಮ್ಯ.ಸಿ.ಕೆ, ಸಹಾಯಕ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ಸಂಸ್ಥೆ, ಬೆಂಗಳೂರು ಕೇಂದ್ರೀಯ ವಿಭಾಗ ರವರು ಸಲ್ಲಿಸಿರುವ ವರದಿ ಮತ್ತು ಅದರ ಅಡಕಗಳ ಮೇಲೆ ಆಧಾರವಾಗಿದೆ. ಅದರಂತೆ ಶ್ರೀ ಬಿ.ಸಿ ನಿರಂಜನ, ಅಂದಿನ ವಿಭಾಗೀಯ ಸಂಚಾರ ಅಧಿಕಾರಿ, ಕೋಲಾರ ವಿಭಾಗ, ಶ್ರೀ ಎಂ.ಬಿ.ಜೈಶಾಂತ್ ಕುಮಾರ್, ವಿಭಾಗೀಯ ಸಂಚಾರ ಅಧಿಕಾರಿ, ಕರಾರಸಾ ಸಂಸ್ಥೆ, ಕೋಲಾರ ವಿಭಾಗ ಮತ್ತು ಶ್ರೀ ಎಂ.ವೀರಭದ್ರಪ್ಪ, ಅಂದಿನ ಕಾನೂನು ಅಧಿಕಾರಿ/ವಿಭಾಗೀಯ ಸಂಚಾರ ಅಧಿಕಾರಿ(ಹೆಚ್ಚುವರಿ), ಕೋಲಾರ ವಿಭಾಗ ರವರು ಈ ಕೆಳಕಂಡ ದುರ್ನಡತೆಗಳನ್ನು ಎಸಗಿರುತ್ತಾರೆ:-

ದಿನಾಂಕ:05-02-2021 ರಂದು ಕೋಲಾರ ವಿಭಾಗ, ಮುಳಬಾಗಿಲು ಘಟಕದ ವಾಹನ ಸಂಖ್ಯೆ:ಕೆಎ:40-ಎಫ್:1367ನ್ನು ತನಿಖಾಧಿಕಾರಿಗಳು ತನಿಖೆ ಮಾಡಿದಾಗ ತನಿಖಾ ಸಂದರ್ಭದಲ್ಲಿ ಸದರಿ ವಾಹನದಲ್ಲಿ ಸಾಗಿಸುತ್ತಿದ್ದ ಲಗೇಜಿಗೆ ವಿಧಿಸುತ್ತಿದ್ದಂತಹ ಲಗೇಜು ದರದಿಂದ ಕಡಿಮೆ ಆದಾಯ ಬಂದಿರುವುದನ್ನು ಗಮನಿಸಿ ಅನುಮಾನಗೊಂಡು ಚಾಲನಾ ಸಿಬ್ಬಂದಿಗೆ ವಿತರಿಸಲಾಗಿದ್ದ ಇಟಿಎಂಗಳಿಂದ ಚಿಕ್ಕಬಳ್ಳಾಪುರ-ಮಂತ್ರಾಲಯ ಮಾರ್ಗಕ್ಕೆ ವಿತರಿಸಲಾಗುವ ಲಗೇಜು ಟಿಕೇಟುಗಳ ಪ್ರಿಂಟ್ ತೆಗೆದುಕೊಂಡು ಪರಿಶೀಲಿಸಿದಾಗ ಸದರಿ ಟಿಕೇಟುಗಳಲ್ಲಿ 2 ಯೂನಿಟ್ ಲಗೇಜಿಗೆ ರೂ.42-00 ಎಂದು ಬರುತ್ತಿರುವುದು ಕಂಡುಬಂದಿರುತ್ತದೆ. ನಂತರ ಬೆಂಗಳೂರು ಕೇಂದ್ರೀಯ ವಿಭಾಗದ ಭದ್ರತಾ ಶಾಖೆಗೆ ಬೆಂಗಳೂರು ಕೇಂದ್ರೀಯ ವಿಭಾಗದ ಮಾದರಿ ಇ.ಟಿ.ಎಂ ಯಂತ್ರವನ್ನು ಪಡೆದು ಅದರಲ್ಲಿ ಬೆಂಗಳೂರಿನಿಂದ ಮಂತ್ರಾಲಯ ಎಂಬುದಾಗಿ ಮಾರ್ಗವನ್ನು ಹಾಕಿಸಿಕೊಂಡು ಚಿಕ್ಕಬಳ್ಳಾಪುರದಿಂದ ಮಂತ್ರಾಲಯ ಮಾರ್ಗಕ್ಕೆ ವಿತರಿಸಲಾಗುವ ಲಗೇಜು ಟಿಕೇಟಿನ ಪ್ರಿಂಟ್‌ನ್ನು ಕೋಲಾರ ವಿಭಾಗದ ಇಟಿಎಂನಿಂದ ತೆಗೆದುಕೊಂಡಿದ್ದಂತೆ ತೆಗೆದುಕೊಂಡು ಸದರಿ ಟಿಕೇಟಿನಲ್ಲಿ ಚಿಕ್ಕಬಳ್ಳಾಪುರ-ಮಂತ್ರಾಲಯ ಮಾರ್ಗಕ್ಕೆ 2 ಯೂನಿಟ್ ಲಗೇಜಿಗೆ ರೂ.110-00 ಎಂದು ನಮೂದಾಗಿರುತ್ತದೆ. ಮೇಲಿನ ನ್ಯೂನತೆಗಳು ಉಂಟಾಗಿರುವುದರ ಕುರಿತು ತನಿಖಾಧಿಕಾರಿಗಳು ಸಂಚಾರ(ವಾಣಿಜ್ಯ) ಶಾಖೆ, ಕೇಂದ್ರ ಕಚೇರಿಗೆ ಭೇಟಿ ನೀಡಿ ವಿಚಾರಣೆ ಮಾಡಿದಾಗ ದಿನಾಂಕ:01-02-2018 ರಂದು ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017-18ನ್ನು ಜಾರಿಗೆ ತಂದು ಅದರಲ್ಲಿ ಟಿಕೇಟು ಮಾಡ್ಯೂಲ್‌ಗಳನ್ನು ಬದಲಾವಣೆ ಮಾಡಿಕೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ. ಈ ಸಂಬಂಧ ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕರಾರಸಾ ಸಂಸ್ಥೆ, ಕೇಂದ್ರ ಕಚೇರಿ ಬೆಂಗಳೂರು ರವರು ದಿನಾಂಕ:22-10-2020 ರಂದು ಲಗೇಜು ಟಿಕೇಟು ವಿತರಣೆಯ ಟಿಕೇಟು ಮಾಡ್ಯೂಲ್‌ನಲ್ಲಿ ವ್ಯತ್ಯಯಗಳಿದ್ದು, ವಿಭಾಗ ವ್ಯಾಪ್ತಿಯ ಅಂತರರಾಜ್ಯಗಳಿಗೆ ಕಾರ್ಯಾಚರಣೆಯಾಗುವ ಮಾರ್ಗಗಳ ಇಟಿಎಂಗಳಲ್ಲಿ ಫೀಡ್ ಮಾಡಿರುವ ಲಗೇಜು ಟಿಕೇಟು ದರಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಹಂತ ಸಂಖ್ಯೆ/ಕಿಮೀ/ ಲಗೇಜು ದರಗಳು ಸರಿಯಿರುವ ಬಗ್ಗೆ ಖಚಿತಪಡಿಸಿಕೊಂಡು, ನ್ಯೂನತೆಗಳಿದ್ದಲ್ಲಿ ಸರಿಪಡಿಸಿ, ಅನುಸರಣಾ ವರದಿಯನ್ನು ತಪ್ಪದೇ ಕಳುಹಿಸಲು ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸೂಚನೆಗಳನ್ನು ನೀಡಿರುವುದು ಕಂಡುಬಂದಿರುತ್ತದೆ. ನಂತರ ಮತ್ತೊಮ್ಮೆ ಮೇಲಿನ ವಿಷಯಕ್ಕೆ ಸಂಭಂದಿಸಿದಂತೆ ದಿನಾಂಕ:2-2-2021 ರಂದು ಅನುಸರಣಾ ವರದಿಯನ್ನು ಕಳುಹಿಸಲು ಸೂಚನೆಗಳನ್ನು ನೀಡಿರುವುದು

ಕಂಡುಬಂದಿರುತ್ತದೆ. ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ), ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ ಇವರ ಪತ್ರ ಸಂಖ್ಯೆ ಕರಾಸಾ/ಕೇಕ/ಸಂ/ವಾ/ಸಿ3/2056/2020-21, ದಿನಾಂಕ 19/03/2021ರಲ್ಲಿ ಸದರಿ ಸುತ್ತೋಲೆಯನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಯಾವುದೇ ಅನುಸರಣಾ ವರದಿಗಳು ಕೋಲಾರ ವಿಭಾಗದಿಂದ ಸ್ವೀಕೃತವಾಗದಿರುವುದು ಕಂಡುಬಂದಿರುತ್ತದೆ. ನಿಗಮದ ಇಟಿಎಂಗಳಲ್ಲಿ ಫೀಡ್ ಆಗಿರುವ ಲಗೇಜು ಟಿಕೇಟು ಮಾಡ್ಯೂಲ್‌ನಲ್ಲಿ ರಾಜ್ಯದೊಳಗಿನ ಲಗೇಜು ದರ ಹಂತ ಹೆಚ್ಚಾದಂತೆ ಹೆಚ್ಚಾಗುತ್ತಿದ್ದು, ವಾಹನವು ಒಮ್ಮೆ ಅಂತರರಾಜ್ಯಕ್ಕೆ ಪ್ರವೇಶವಾದಲ್ಲಿ ಅಲ್ಲಿಂದ ಅಂತರರಾಜ್ಯಕ್ಕೆ ಮ್ಯಾಟ್ರಿಕ್ಸ್ ಸ್ಟೇಜ್‌ಗಳು ಫೀಡ್ ಮಾಡಬೇಕಾಗಿರುತ್ತದೆ. ಆದರೆ ಕೋಲಾರ ವಿಭಾಗಗಳಲ್ಲಿ ಸದರಿ ಇಟಿಎಂಗಳಲ್ಲಿ ಅಂತರರಾಜ್ಯ ಲಗೇಜು ನಿಗದಿತ ಟಿಕೇಟು ದರ ಫೀಡ್ ಆಗದೇ, ರಾಜ್ಯದೊಳಗಿನ ದರವನ್ನೇ ಮುಂದುವರೆಸಿ ಸಂಸ್ಥೆಗೆ ಹೆಚ್ಚಿನ ಆರ್ಥಿಕ ನಷ್ಟವುಂಟಾಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಈ ಸಂಬಂಧ ಹೆಚ್ಚಿನ ತನಿಖೆ ನಡೆಸಿ ವರದಿ ಸಲ್ಲಿಸಲು ಅನುಮತಿ ನೀಡುವಂತೆ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ ರವರನ್ನು ಪತ್ರ ಸಂಖ್ಯೆ ಕರಾಸಾ/ಬೆಂಕೇವಿ /ಭ/ಭಮಜಾ/532/2020-21, ದಿನಾಂಕ:09/02/2021 ರಂತೆ ತನಿಖಾ ತಂಡ ಕೋರಿದ್ದು ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ, ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ ರವರು ಪತ್ರ ಸಂಖ್ಯೆ ಕರಾಸಾ/ಕೇಕ/ಭ/ಆರ್/1648/2020-21, ದಿನಾಂಕ:02/03/2021 ರಲ್ಲಿ ಕೋಲಾರ ವಿಭಾಗಗಳಲ್ಲಿನ ಲಗೇಜು ಟಿಕೇಟು ವಿತರಣೆಯಿಂದ ಸಂಸ್ಥೆಗೆ ಆಗಿರುವ ಆರ್ಥಿಕ ಹಾನಿಯ ಬಗ್ಗೆ ಕೂಲಂಕಷವಾಗಿ ತನಿಖೆ ಕೈಗೊಂಡು ವಿವರವಾದ ವರದಿ ನೀಡುವಂತೆ ಸೂಚಿಸಿರುತ್ತಾರೆ. ಮೇಲಿನ ನ್ಯೂನತೆಗಳಿಗೆ ಸಂಬಂಧಿಸಿದಂತೆ ವಿಭಾಗೀಯ ನಿಯಂತ್ರಣಾಧಿಕಾರಿ(ಸಂಚಾರ), ಕ.ರಾ.ರ.ಸಾ.ನಿಗಮ, ಕೋಲಾರ ವಿಭಾಗರವರು ದಿನಾಂಕ:01/02/2018 ರಿಂದ ಫೆಬ್ರವರಿ-2021ರವರೆಗೆ ಕೋಲಾರ ವಿಭಾಗದ ವಿವಿಧ ಘಟಕಗಳಿಂದ ಕಾರ್ಯಾಚರಣೆಗೊಳಿಸಿದ ಅಂತರರಾಜ್ಯ ಅನುಸೂಚಿಗಳ ಸಂಖ್ಯೆಯನ್ನು ಹಾಗೂ ಕಾರ್ಯಾಚರಣೆಗೊಳಿಸಲಾದ ಸ್ಥಳಗಳ ವಿವರ ಮತ್ತು ನಮೂನೆ-4 ರ ದೃಢೀಕೃತ ಪತ್ರ ಸಂಖ್ಯೆ ಕರಾಸಾ/ಕೋವಿ/ಸಂ/ಕಾ/2216/20-21, ದಿನಾಂಕ:31/03/2021 ರಲ್ಲಿ ದಿನಾಂಕ:01/02/2018 ರಿಂದ ಕೋಲಾರ ವಿಭಾಗದಿಂದ ಕಾರ್ಯಾಚರಣೆಗೊಂಡ ಅಂತರರಾಜ್ಯ ಅನುಸೂಚಿಗಳ ವಿವರವನ್ನು ಒದಗಿಸಿರುತ್ತಾರೆ. ಸಂಗ್ರಹಿಸಿದ ಅಂತರ ರಾಜ್ಯ ವಾಹನಗಳ ಕಾರ್ಯಾಚರಣೆ ಕುರಿತು ದಿನಾಂಕ:01/02/2018 ರಿಂದ ಫೆಬ್ರವರಿ-2021 ರವರೆಗೆ ಇ.ಟಿ.ಎಂ ಟಿಕೇಟಿನ ಅಬ್‌ಸ್ಟ್ರಾಕ್‌ಗಳನ್ನು ಒದಗಿಸುವಂತೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಕೋಲಾರ ವಿಭಾಗ ಇವರಿಗೆ ಪತ್ರ ಸಂಖ್ಯೆ ಕರಾಸಾ/ಕೋವಿ/ಅಂಅಂ/43/2021-22, ದಿನಾಂಕ 09/08/2021 ರಲ್ಲಿ ತನಿಖಾ ತಂಡ ಕೋರಿದ್ದು ಅದರಂತೆ ಸದರಿ ಅವಧಿಯಲ್ಲಿ ಕಾರ್ಯಾಚರಣೆಗೊಳಿಸಲಾದ ಅಂತರರಾಜ್ಯ ಅನುಸೂಚಿಗಳ ಇ.ಟಿ.ಎಂ ಟಿಕೇಟು ದತ್ತಾಂಶವನ್ನು ಅಬ್‌ಸ್ಟ್ರಾಕ್ಟ್ ಸಂಖ್ಯೆಗಳ ವಿವರಗಳೊಂದಿಗೆ, ಸಂಪೂರ್ಣ ಲಗೇಜು ಟಿಕೇಟು ಮಾರಾಟವಾಗಿರುವ ದತ್ತಾಂಶ ವಿವರವನ್ನು ಇ-ಮೇಲ್ ಮೂಲಕ ಒದಗಿಸಿರುತ್ತಾರೆ. ಕೋಲಾರ ವಿಭಾಗದಿಂದ ಫೆಬ್ರವರಿ-2018 ರಿಂದ ಮಾರ್ಚ್-2021 ರವರೆಗೆ ಕಾರ್ಯಾಚರಣೆಯಾಗಿರುವ ಅಂತರರಾಜ್ಯ ಅನುಸೂಚಿಗಳ ಮೂಲಕ ನಿಗಮವು ಗಳಿಸಿರುವ ಲಗೇಜು ಆದಾಯದ ದೈನಂದಿನ ಅನುಸೂಚಿವಾರು, ಹಂತವಾರು ದತ್ತಾಂಶ ವಿವರವನ್ನು ಡಿ.ಸಿ.ಎಸ್ ಮೂಲಕ ಪಡೆದು ಪರಿಶೀಲಿಸಲು ಓರ್ವ ಗಣಕ ಸಂಯೋಜಕರ ಅವಶ್ಯಕತೆ ಇದ್ದಿದ್ದರ ಕುರಿತು ಗಣಕ ಮೇಲ್ವಿಚಾರಕ ಸಿಬ್ಬಂದಿಯನ್ನು ನಿಯೋಜಿಸುವಂತೆ ತನಿಖಾ ತಂಡ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿಯವರನ್ನು ಪತ್ರ ಸಂಖ್ಯೆ ಕರಾಸಾ/ಬೆಂಕೇವಿ/ಭ/ಸಭಜಾಅ/125/2021-22, ದಿನಾಂಕ 02/08/2021 ರಂತೆ ಕೋರಿದ್ದು ಅದರಂತೆ ಕುಮಾರಿ ಸಾಧನಾ.ವಿ, ಸಹಾಯಕ ಗಣಕ ವ್ಯವಸ್ಥಾಪಕರನ್ನು ದತ್ತಾಂಶ ವಿವರ ಪಡೆಯಲು ಮತ್ತು ವಿಶ್ಲೇಷಿಸಲು ನಿಯೋಜಿಸಿ ಕೊಟ್ಟಿರುತ್ತಾರೆ. ನಂತರ ಆಡಳಿತಾತ್ಮಕ ಕಾರಣಗಳ ಮೇರೆಗೆ ಶ್ರೀ ಆನಂದ, ಗಣಕ ಅಧೀಕ್ಷಕರು, ಬೆಂಗಳೂರು ಕೇಂದ್ರೀಯ ವಿಭಾಗ ರವರನ್ನು

ನಿಯೋಜಿಸಿರುತ್ತಾರೆ. ಕೋಲಾರ ವಿಭಾಗದಿಂದ ಪಡೆದಂತಹ ಲಗೇಜು ಟಿಕೇಟು ದತ್ತಾಂಶವನ್ನು ವಿಶ್ಲೇಷಣೆ ಮಾಡಿ, ಸದರಿ ದತ್ತಾಂಶಗಳನ್ನು ಸಿ.ಡಿಯ ರೂಪದಲ್ಲಿ ಪಡೆಯಲಾಗಿದೆ. ಲಗೇಜು ಟಿಕೇಟು ದತ್ತಾಂಶದ ವಿಶ್ಲೇಷಣೆಯನ್ನು ಪರಿಶೀಲಿಸಿದಾಗ, ಕೊಲಾರ ವಿಭಾಗದಲ್ಲಿ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017–18 ರಂತೆ ಅಂತರರಾಜ್ಯ ಮಾರ್ಗಗಳಲ್ಲಿರುವ ಸ್ಥಳಗಳಿಗೆ ಇ.ಟಿ.ಎಂ ತಂತ್ರಾಂಶದಲ್ಲಿ ಅಗತ್ಯ ನಿಗದಿತ ಹಂತದ ದರವನ್ನು ದಿನಾಂಕ:01/02/2018 ರಿಂದ ಫೆಬ್ರವರಿ–2021 ರವರೆಗೆ ಕೋಲಾರ ವಿಭಾಗದ ವಿವಿಧ ಘಟಕಗಳಿಂದ ಕಾರ್ಯಾಚರಣೆಗೊಳಿಸದೆ, ಅಂತರರಾಜ್ಯ ಅನುಸೂಚಿಗಳ ನಿಗಮದ ಇಟಿಎಂಗಳಲ್ಲಿ ಫೀಡ್ ಆಗಿರುವ ಲಗೇಜು ಟಿಕೇಟು ಮಾಡ್ಯೂಲ್‌ನಲ್ಲಿ ರಾಜ್ಯದೊಳಗಿನ ಲಗೇಜು ದರ ಹಂತ ಹೆಚ್ಚಾದಂತೆ ಹೆಚ್ಚಾಗುತ್ತಿದ್ದು, ವಾಹನವು ಒಮ್ಮೆ ಅಂತರ ರಾಜ್ಯಕ್ಕೆ ಪ್ರವೇಶವಾದಲ್ಲಿ ಅಲ್ಲಿಂದ ಅಂತರರಾಜ್ಯಕ್ಕೆ ಮ್ಯಾಟ್ರಿಕ್ಸ್ ಸ್ಟೇಜ್‌ಗಳನ್ನು ಫೀಡ್ ಮಾಡಬೇಕಾಗಿರುತ್ತದೆ. ಆದರೆ ಕೋಲಾರ ವಿಭಾಗಗಳಲ್ಲಿ ಸದರಿ ಇಟಿಎಂಗಳಲ್ಲಿ ಅಂತರರಾಜ್ಯ ಲಗೇಜು ನಿಗದಿತ ಟಿಕೇಟ್ ದರ ಫೀಡ್ ಆಗದೇ, ರಾಜ್ಯದೊಳಗಿನ ದರವನ್ನೇ ಮುಂದುವರೆಸಿ ಸಂಸ್ಥೆಗೆ ಕೋಲಾರ ವಿಭಾಗದ ಈ ಕೆಳಕಂಡ ಘಟಕಗಳಿಂದ ಆರ್ಥಿಕ ನಷ್ಟವುಂಟಾಗಿರುವುದು ಕಂಡುಬಂದಿರುತ್ತದೆ. ದಿನಾಂಕ:01/02/2018 ರಿಂದ ಫೆಬ್ರವರಿ–2021 ರವರೆಗೆ ಕೆ.ಜಿ.ಎಫ್ ಘಟಕದಿಂದ ಕಾರ್ಯಾಚರಣೆ ಆಗಿರುವಂತಹ ಅನುಸೂಚಿಗಳಿಂದ ಮ್ಯಾಟ್ರಿಕ್ಸ್ ಸ್ಟೇಜ್‌ಗಳು ಫೀಡ್ ಆಗದೇ ಸಂಸ್ಥೆಗೆ ಉಂಟಾಗಿರುವ ನಷ್ಟದ ವಿವರ ಈ ಕೆಳಕಂಡಂತಿರುತ್ತದೆ:–

| ಅಂತರ ರಾಜ್ಯ ಅನುಸೂಚಿ ಸಂಖ್ಯೆ | ಅಂತರ ರಾಜ್ಯ ಲಗೇಜು ದರ ಪರಿಷ್ಕರಣೆಯಾಗದಿರುವುದರಿಂದ ಆದ ನಷ್ಟ (ರೂಗಳಲ್ಲಿ) |
|---|---|
| 61 | 6 |
| 216 | 25 |
| 161AB | 26811 |
| 162AB | 30309 |
| 238AB | 52 |
| 69AB | 0 |
| 71AB | 0 |
| 90/91 | 2207 |
| ಒಟ್ಟು ಮೊತ್ತ | 59410 |

ದಿನಾಂಕ 01/02/2018 ರಿಂದ ಫೆಬ್ರವರಿ–2021 ರವರೆಗೆ ಕೋಲಾರ ಘಟಕದಿಂದ ಕಾರ್ಯಾಚರಣೆ ಆಗಿರುವಂತಹ ಅನುಸೂಚಿಗಳಿಂದ ಮ್ಯಾಟ್ರಿಕ್ಸ್ ಸ್ಟೇಜ್‌ಗಳು ಫೀಡ್ ಆಗದೇ ಸಂಸ್ಥೆಗೆ ಉಂಟಾಗಿರುವ ನಷ್ಟದ ವಿವರ ಈ ಕೆಳಕಂಡಂತಿರುತ್ತದೆ:–

| ಅಂತರ ರಾಜ್ಯ ಅನುಸೂಚಿ ಸಂಖ್ಯೆ | ಅಂತರ ರಾಜ್ಯ ಲಗೇಜು ದರ ಪರಿಷ್ಕರಣೆಯಾಗದಿರುವುದರಿಂದ ಆದ ನಷ್ಟ (ರೂಗಳಲ್ಲಿ) |
|---|---|
| 100 | 29366 |
| 209 | 40463 |
| 213 | 12438 |
| 214 | 20901 |
| 273 | 8 |
| 238AB | 3411.5 |
| 245AB | -8 |
| 55AB | 203092 |
| 71AB | 32435 |
| 72AB | 80573 |

ದಿನಾಂಕ 01/02/2018 ರಿಂದ ಫೆಬ್ರವರಿ–2021 ರವರೆಗೆ ಶ್ರೀನಿವಾಸಪುರ ಘಟಕದಿಂದ ಕಾರ್ಯಾಚರಣೆ ಆಗಿರುವಂತಹ ಅನುಸೂಚಿಗಳಿಂದ ಮ್ಯಾಟ್ರಿಕ್ಸ್ ಸ್ಟೇಜ್‌ಗಳು ಫೀಡ್ ಆಗದೇ ಸಂಸ್ಥೆಗೆ ಉಂಟಾಗಿರುವ ನಷ್ಟದ ವಿವರ ಈ ಕೆಳಕಂಡಂತಿರುತ್ತದೆ:–

| ಅಂತರ ರಾಜ್ಯ ಅನುಸೂಚಿ ಸಂಖ್ಯೆ | ಅಂತರ ರಾಜ್ಯ ಲಗೇಜು ದರ ಪರಿಷ್ಕರಣೆಯಾಗದಿರುವುದರಿಂದ ಆದ ನಷ್ಟ (ರೂಗಳಲ್ಲಿ) |
|---|---|
| 17 | –485 |
| 27 | –388 |
| 40 | –656 |
| 154AB | 44 |
| 176AB | 12243 |
| 66/67 | 131785 |
| 97/98 | 88 |
| 9AB | –4528 |
| ಒಟ್ಟು ಮೊತ್ತ | 138103 |

ಮೇಲಿನಂತೆ, ದಿನಾಂಕ:01/02/2018 ರಿಂದ 12/11/2021 ರವರೆಗೆ ಕೋಲಾರ ವಿಭಾಗದ ವಿವಿಧ ಘಟಕಗಳಿಂದ ಕಾರ್ಯಾಚರಣೆಗೊಳಿಸಿದ ಅಂತರರಾಜ್ಯ ಅನುಸೂಚಿಗಳಲ್ಲಿ ನಿಗಮದ ಇಟಿಎಂಗಳಲ್ಲಿ ಫೀಡ್ ಆಗಿರುವ ಲಗೇಜು ಟಿಕೇಟು ಮಾಡ್ಯೂಲ್‌ನಲ್ಲಿ ರಾಜ್ಯದೊಳಗಿನ ಲಗೇಜು ದರ ಹಂತ ಹೆಚ್ಚಾದಂತೆ ಹೆಚ್ಚಾಗುತ್ತಿದ್ದು, ವಾಹನವು ಒಮ್ಮೆ ಅಂತರ ರಾಜ್ಯಕ್ಕೆ ಪ್ರವೇಶವಾದಲ್ಲಿ ಅಲ್ಲಿಂದ ಅಂತರರಾಜ್ಯಕ್ಕೆ ಮ್ಯಾಟ್ರಿಕ್ಸ್ ಸ್ಟೇಜ್‌ಗಳನ್ನು ಫೀಡ್ ಮಾಡಬೇಕಾಗಿರುತ್ತದೆ. ಆದರೆ ಕೋಲಾರ ವಿಭಾಗಗಳಲ್ಲಿ ಸದರಿ ಇಟಿಎಂಗಳಲ್ಲಿ ಅಂತರರಾಜ್ಯ ಲಗೇಜು ನಿಗದಿತ ಟಿಕೇಟು ದರ ಫೀಡ್ ಆಗದೇ, ರಾಜ್ಯದೊಳಗಿನ ದರವನ್ನೇ ಮುಂದುವರೆಸಿ ಸಂಸ್ಥೆಗೆ ಕೋಲಾರ ವಿಭಾಗದ ಘಟಕಗಳಿಂದ ರೂ.7,63,243/– ಆರ್ಥಿಕ ನಷ್ಟವುಂಟಾಗಿರುವುದು ಕಂಡುಬಂದಿರುತ್ತದೆ. ಮುಂದುವರೆದು, ದಿನಾಂಕ:01/02/2018 ರಿಂದ ಫೆಬ್ರವರಿ–2021 ರವರೆಗೂ ಕೋಲಾರ ವಿಭಾಗದ ದತ್ತಾಂಶಗಳ ಪರಿಶೀಲನೆಯ ಸಂದರ್ಭದಲ್ಲಿ ಕೋಲಾರ ವಿಭಾಗದ ಅಂತರರಾಜ್ಯ ಕಾರ್ಯಾಚರಣೆಯಾದ ಮಾರ್ಗಗಳ ಟಿಕೇಟು ಮಾಡ್ಯೂಲ್‌ನಲ್ಲಿ ಇತ್ತೀಚಿನವರೆಗೂ ಸಹ ಮ್ಯಾಟ್ರಿಕ್ಸ್ ಸ್ಟೇಜ್‌ಗಳನ್ನು ಸುತ್ತೋಲೆ ನಿಯಮದ ಪ್ರಕಾರ ಕೆಲವೊಂದು ಅಂತರ ರಾಜ್ಯ ಅನುಸೂಚಿಗಳಲ್ಲಿ ಮಾರ್ಪಾಡು ಮಾಡಿಕೊಳ್ಳದಿರುವುದು ಸದರಿಯವರೇ ನೀಡಿರುವಂತಹ ದತ್ತಾಂಶಗಳಿಂದ ಕಂಡು ಬಂದಿರುತ್ತದೆ. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 791/2017–18 ರಂತೆ ಅಂತರರಾಜ್ಯ ಮಾರ್ಗಗಳಲ್ಲಿರುವ ಸ್ಥಳಗಳಿಗೆ ಇ.ಟಿ.ಎಂ ತಂತ್ರಾಂಶದಲ್ಲಿ ಅಗತ್ಯ ನಿಗದಿತ ಹಂತದ ದರವನ್ನು ದಿನಾಂಕ:01/02/2018 ರಿಂದ ನಿಗದಿಪಡಿಸದಿರುವ ಬಗ್ಗೆ ಕೋಲಾರ ವಿಭಾಗಕ್ಕೆ ಮಾಹಿತಿ ತಲುಪಿದ್ದರೂ ಲಗೇಜು ಟಿಕೇಟು ದರವನ್ನು ಪರಿಷ್ಕರಣೆ ಮಾಡಿರುವುದಿಲ್ಲ. ಆದ್ದರಿಂದ ಮೇಲ್ಕಂಡ ನ್ಯೂನತೆಯ ಬಗ್ಗೆ ದಿನಾಂಕ:01–03–2021 ರಿಂದ 12–11–2021 ರವರೆವಿಗೂ ಮಾಹಿತಿ ಕೋರಿ ಮತ್ತೊಮ್ಮೆ ಪತ್ರ ಸಂಖ್ಯೆ ಕರಾಸಾ/ಬೆಂಕೇವಿ/ಭ/ಸಭಮಜಾ/261/2021–22, ದಿನಾಂಕ:13/10/2021 ರಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳನ್ನು ತನಿಖಾ ತಂಡ ಕೋರಿದ್ದು, ದಿನಾಂಕ:01/03/2021 ರಿಂದ ದಿನಾಂಕ 12/11/2021 ವರೆಗಿನ ಲಗೇಜು ಟಿಕೇಟ್ ದತ್ತಾಂಶಗಳನ್ನು ಕೋಲಾರ ವಿಭಾಗದಿಂದ ಪಡೆಯಲಾಗಿದ್ದು, ದಿನಾಂಕ 01/03/2021 ರಿಂದ 12/11/2021 ರವರೆಗೆ ಕೋಲಾರ ವಿಭಾಗದ ವಿವಿಧ ಘಟಕಗಳಿಂದ ... ಕೋಲಾರ ವಿಭಾಗಗಳಲ್ಲಿ ಸದರಿ ಇಟಿಎಂಗಳಲ್ಲಿ ಅಂತರರಾಜ್ಯ ಲಗೇಜು

| | |
|---|---|
| 23AB | 3094.5 |
| 4AB | 12677 |
| 80/81 | 9704 |
| 84AB | 6730 |
| ಒಟ್ಟು ಮೊತ್ತ | 42548 |

ಶ್ರೀನಿವಾಸಪುರ ಘಟಕ

| ಅಂತರ ರಾಜ್ಯ ಅನುಸೂಚಿ ಸಂಖ್ಯೆ | ಅಂತರ ರಾಜ್ಯ ಲಗೇಜು ದರ ಪರಿಷ್ಕರಣೆಯಾಗದಿರುವುದರಿಂದ ಆದ ನಷ್ಟ (ರೂಗಳಲ್ಲಿ) |
|---|---|
| 17 | -123 |
| 27 | -26 |
| 40 | -267 |
| 154AB | 44 |
| 176AB | 2000 |
| 66/67 | 75983 |
| 97/98 | 0 |
| 9AB | -1744 |
| ಒಟ್ಟು ಮೊತ್ತ | 75867 |

ಶ್ರೀ ಎಂ.ಬಿ.ಜೈಶಾಂತ್ ಕುಮಾರ್, ವಿಭಾಗೀಯ ಸಂಚಲನಾಧಿಕಾರಿ, ಕೋಲಾರ ವಿಭಾಗ ರವರು ಸಾಮಾನ್ಯ ಸ್ಥಾಯಿ ಆದೇಶ 791/2017-18 ದಿ:25-1-2018ರಂತೆ ಲಗೇಜು ದರವನ್ನು ಕೋಲಾರ ವಿಭಾಗದ ಅಂತರರಾಜ್ಯ ಅನುಸೂಚಿಗಳಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ಸೂಕ್ತ ಮೇಲ್ವಿಚಾರಣೆಯನ್ನು ಮಾಡದೇ ಇರುವ ಕಾರಣ ಇವರ ಕಾರ್ಯ ಅವಧಿಯಲ್ಲಿ ನಿಗಮಕ್ಕೆ ಒಟ್ಟು ರೂ.2,74,483/- ನಷ್ಟವುಂಟಾಗಿದ್ದು, ಇದಕ್ಕೆ ಸದರಿಯವರೇ ನೇರ ಹೊಣೆಗಾರರಾಗಿರುತ್ತಾರೆ. ಘಟಕವಾರು ನಷ್ಟದ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ:-

ಕೆ.ಜಿ.ಎಫ್ ಘಟಕ

| ಅಂತರ ರಾಜ್ಯ ಅನುಸೂಚಿ ಸಂಖ್ಯೆ | ಅಂತರ ರಾಜ್ಯ ಲಗೇಜು ದರ ಪರಿಷ್ಕರಣೆಯಾಗದಿರುವುದರಿಂದ ಆದ ನಷ್ಟ (ರೂಗಳಲ್ಲಿ) |
|---|---|
| 14 | 150 |
| 61 | 6 |
| 44198 | 200 |
| 161AB | 11314 |
| 162AB | 7487 |
| 188/89 | 15196 |
| 240/41 | 129 |
| 55/56 | 160 |
| AD3 | 37 |
| AD5 | 52 |
| ಒಟ್ಟು ಮೊತ್ತ | 34731 |

ಕೋಲಾರ ಘಟಕ

| | |
|---|---|
| ADD3 | 176 |
| ADD4 | 60 |
| ADD5 | 81 |
| ADD6 | 4 |
| ADD7 | 41 |
| ADD8 | 50 |
| ಒಟ್ಟು ಮೊತ್ತ | 57749 |

ಸುತ್ತೋಲೆ ಸಂಖ್ಯೆ:01/2013, ದಿನಾಂಕ:05/04/2013 ಮತ್ತು ಸುತ್ತೋಲೆ ಸಂಖ್ಯೆ 01/2020, ದಿನಾಂಕ:02/11/2020 ಗಳಲ್ಲಿ ವಿದ್ಯುನ್ಮಾನ ಟಿಕೇಟು ಯಂತ್ರ (ಇ.ಟಿ.ಎಂ) ಗಳಲ್ಲಿ ವಿಭಾಗ ಮತ್ತು ಘಟಕಗಳಲ್ಲಿ ಗಣಕೀಕರಣದ ತಂತ್ರಾಂಶವನ್ನು ಉಪಯೋಗಿಸುವ ಹೊಣೆಗಾರಿಕೆಯ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ವಿಭಾಗ ಘಟಕಗಳ ಗಣಕ ತಂತ್ರಾಂಶವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಹಾಗೂ ಘಟಕ ಗಣಕೀಕರಣ ತಂತ್ರಾಂಶದ ದತ್ತಾಂಶಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು, ಡಿಸಿಎಸ್ ತಂತ್ರಾಂಶ, ಡೇಟಾಬೇಸ್ ಹಾಗೂ ಸರ್ವರ್‌ಗೆ ಸಂಬಂಧಿಸಿದ ಕೆಲಸ ಕಾರ್ಯಗಳಿಗೆ ಜವಾಬ್ದಾರಿಯುತ ವ್ಯಕ್ತಿಗಳನ್ನು ಸೂಚಿಸಲಾಗಿರುತ್ತದೆ. ಸದರಿ ಸುತ್ತೋಲೆಗಳ ನಿರ್ದೇಶನಗಳನ್ವಯ ಮಾರ್ಗ ಹಾಗೂ ದರಗಳ ಸಂಬಂಧಿತ ಮಾಹಿತಿಯನ್ನು ಘಟಕಗಳಿಗೆ ಒದಗಿಸುವುದು ಮತ್ತು ಇ.ಟಿ.ಎಂಗಳಲ್ಲಿ ಸದರಿ ಮಾಹಿತಿ ಪರಿಷ್ಕರಣೆಯಾಗಿರುವುದನ್ನು ಖಚಿತಪಡಿಸಿಕೊಳ್ಳುವುದು ಸಹಾಯಕ ಸಂಚಾರ ವ್ಯವಸ್ಥಾಪಕ/ವಿಭಾಗೀಯ ಸಂಚಲನಾಧಿಕಾರಿಗಳ ಜವಾಬ್ದಾರಿಯೆಂದು ತಿಳಿಸಲಾಗಿರುತ್ತದೆ. ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ), ಕರಾರಸಾ ನಿಗಮ, ಕೇಂದ್ರ ಕಚೇರಿ, ಬೆಂಗಳೂರು ರವರು ದಿನಾಂಕ:22-10-2020 ರಂದು ಲಗೇಜು ಟಿಕೇಟು ವಿತರಣೆಯ ಟಿಕೇಟು ಮಾಡ್ಯೂಲ್‌ನಲ್ಲಿ ವ್ಯತ್ಯಯಗಳಿರುವ ಬಗ್ಗೆ ಮಾಹಿತಿ ನೀಡಿ, ತಮ್ಮ ವಿಭಾಗ ವ್ಯಾಪ್ತಿಯ ಅಂತರ ರಾಜ್ಯಗಳಿಗೆ ಕಾರ್ಯಾಚರಣೆಯಾಗುವ ಮಾರ್ಗಗಳ ಇಟಿಎಂಗಳಲ್ಲಿ ಫೀಡ್ ಮಾಡಿರುವ ಲಗೇಜು ಟಿಕೇಟು ದರಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಹಂತ ಸಂಖ್ಯೆ/ಕಿಮೀ/ಲಗೇಜು ದರಗಳು ಸರಿಯಿರುವ ಬಗ್ಗೆ ಖಚಿತಪಡಿಸಿಕೊಂಡು, ನ್ಯೂನತೆಗಳಿದ್ದಲ್ಲಿ ಸರಿಪಡಿಸಿ, ಅನುಸರಣಾ ವರದಿಯನ್ನು ತಪ್ಪದೇ ಕಳುಹಿಸಲು ಸೂಚನೆಗಳನ್ನು ನೀಡಿರುತ್ತಾರೆ. ನಂತರ ದಿನಾಂಕ:2-2-2021 ರಂದು ಮತ್ತೊಮ್ಮೆ ಅನುಸರಣಾ ವರದಿಯನ್ನು ಕಳುಹಿಸಲು ಸೂಚನೆಗಳನ್ನು ನೀಡಿದ್ದರೂ ಸಹ ಕೋಲಾರ ವಿಭಾಗದ ವಿಭಾಗೀಯ ಸಂಚಲನಾಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳದಿರುವುದು ದೃಢಪಡುತ್ತದೆ. ಫೆಬ್ರವರಿ-2018 ರಿಂದ ನವೆಂಬರ್-2021 ರವರೆಗೆ ಕೋಲಾರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ್ದ ಅವಧಿಯಲ್ಲಿ ಶ್ರೀ ಬಿ.ಸಿ.ನಿರಂಜನ್, ಅಂದಿನ ವಿಭಾಗೀಯ ಸಂಚಲನಾಧಿಕಾರಿ, ಕೋಲಾರ ವಿಭಾಗ ಮತ್ತು ಶ್ರೀ ಎಂ.ಬಿ.ಜೈಶಾಂತ್ ಕುಮಾರ್, ವಿಭಾಗೀಯ ಸಂಚಲನಾಧಿಕಾರಿ, ಕೋಲಾರ ವಿಭಾಗ ರವರುಗಳು ತಮ್ಮ ಆಡಳಿತಾವಧಿಯಲ್ಲಿ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:791/2017-18 ರಂತೆ ಅಂತರರಾಜ್ಯ ಮಾರ್ಗಗಳಲ್ಲಿರುವ ಸ್ಥಳಗಳಿಗೆ ಇ.ಟಿ.ಎಂ ತಂತ್ರಾಂಶದಲ್ಲಿ ಅಗತ್ಯ ನಿಗಧಿತ ಹಂತದ ದರವನ್ನು ನಿಗದಿಪಡಿಸದೇ ಶ್ರೀ ಬಿ.ಸಿ.ನಿರಂಜನ್, ಅಂದಿನ ವಿಭಾಗೀಯ ಸಂಚಲನಾಧಿಕಾರಿ, ಕೋಲಾರ ವಿಭಾಗ ರವರ ಕರ್ತವ್ಯದ ಅವಧಿಯಲ್ಲಿ (ದಿನಾಂಕ 01/01/2018 ರಿಂದ ದಿನಾಂಕ 04/09/2019) ರೂ.4,50,297/- ಮತ್ತು ಶ್ರೀ ಎಂ.ಬಿ.ಜೈಶಾಂತ್ ಕುಮಾರ್, ವಿಭಾಗೀಯ ಸಂಚಲನಾಧಿಕಾರಿ ಕರ್ತವ್ಯದ ಅವಧಿಯಲ್ಲಿ (ದಿನಾಂಕ 25/10/2019 ರಿಂದ 12/11/2021 ರವರೆಗೆ) ರೂ.2,74,483/- ಗಳು ಆರ್ಥಿಕ ನಷ್ಟ ಉಂಟಾಗಲು ನೇರ ಹೊಣೆಗಾರರಾಗಿರುತ್ತಾರೆ ಹಾಗೂ ಶ್ರೀ ಎಂ.ವೀರಭದ್ರಪ್ಪ, ಅಂದಿನ ಕಾನೂನು ಅಧಿಕಾರಿ/ವಿಭಾಗೀಯ ಸಂಚಾರ ಅಧಿಕಾರಿ(ಹೆಚ್ಚುವರಿ), ಕೋಲಾರ ವಿಭಾಗ

ಇವರು ದಿನಾಂಕ 04/09/2019 ರಿಂದ 24/09/2019 ರವರೆವಿಗೂ ಕಾರ್ಯ ನಿರ್ವಹಿಸಿದ್ದು, ಸದ ಅವಧಿಯಲ್ಲಿ ಲಗೇಜು ಟಿಕೇಟು ಮಾಡ್ಯೂಲ್‌ನಲ್ಲಿನ ವ್ಯತ್ಯಯದಿಂದ ರೂ.1,51,792/- ಆರ್ಥಿಕ ನ ಉಂಟಾಗಲು ನೇರವಾಗಿ ಜವಾಬ್ದಾರರಾಗಿರುತ್ತಾರೆ.

ಆಪಾದಿತರುಗಳು ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮೇಲಿನಂತೆ ನ್ಯೂನತೆಗಳನ್ನು ಎಸಗಿ ಕರ್ತವ್ಯದಲ್ಲಿ ನಿಷ್ಠೆಯನ್ನು ಕಾಪಾಡಲು ವಿಫಲರಾಗಿ, ಸಂಸ್ಥೆಯ ನೌಕರರಿಗೆ ತರವಲ್ಲದ ಕೃತ್ಯವನ್ನೆಸಗಿ ಕರಾರಸಾ ಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು ನಿಯಮಾವಳಿಗಳು 1971ರ ನಿಯಮಾವಳಿ 3 (1) ರ (ii) ಮತ್ತು (iii) ನ್ನು ಉಲ್ಲಂಘಿಸಿರುತ್ತಾರೆ.

**ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷಿಗಳು ಮತ್ತು ದಾಖಲೆಗಳ ಪಟ್ಟಿ ಕೆಳಗಿನಂತಿದೆ:-**

**ಸಾಕ್ಷಿಗಳ ಪಟ್ಟಿ:**

1.ಶ್ರೀಮತಿ. ರಮ್ಯ.ಸಿ.ಕೆ, ಸಹಾಯಕ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ಸಂಸ್ಥೆ, ಬೆಂಗಳೂರು ಕೇಂದ್ರೀಯ ವಿಭಾಗ

**ದಾಖಲಾತಿ ಪಟ್ಟಿ:**

1. ಶ್ರೀಮತಿ. ರಮ್ಯ.ಸಿ.ಕೆ, ಸಹಾಯಕ ಭದ್ರತಾ ಮತ್ತು ಜಾಗೃತಾಧಿಕಾರಿ, ಕರಾರಸಾ ಸಂ ಬೆಂಗಳೂರು ಕೇಂದ್ರೀಯ ವಿಭಾಗ ಇವರು ಸಲ್ಲಿಸಿರುವ ವರದಿ ಸಂ ಕರಾಸಾ/ಬೆಂಕೇವಿ/ಭ/ಸಭಮಜಾ/341/2021-22 ಹಾಗೂ ಅದರೊಂದಿಗಿನ ಅಡಕಗಳು.

**ಟಿಪ್ಪಣಿ:** ಅವಶ್ಯವಾಗಿದ್ದಲ್ಲಿ ಹೆಚ್ಚುವರಿ ಸಾಕ್ಷಿಗಳನ್ನು ಮತ್ತು ದಾಖಲಾತಿಗಳನ ಹಾಜರುಪಡಿಸಲಾಗುವುದು.

ನೀವು ಆಪಾದನಾ ಪತ್ರ ಸ್ವೀಕರಿಸಿದ 10 (ಹತ್ತು) ದಿನಗಳೊಳಗಾಗಿ ನಿಮ್ಮ ಸ್ವರಕ್ಷಣಾತ್ಮಕ ಲಿಖಿ ಹೇಳಿಕೆಯನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿದೆ. ನಿಗದಿಪಡಿಸಿದ ಅವಧಿಯೊಳಗೆ ನಿ ಸಮಜಾಯಿಷಿಯನ್ನು ಸಲ್ಲಿಸಲು ತಪ್ಪಿದಲ್ಲಿ ನಿಮ್ಮ ಹೇಳಿಕೆ ಏನೂ ಇಲ್ಲವೆಂದು ಪರಿಗಣಿ ಕರಾರಸಾಸಂಸ್ಥೆ ನೌಕರರ (ನಡತೆ ಮತ್ತು ಶಿಸ್ತು) ನಿಯಮಾವಳಿಗಳು 1971ರ ಅನುಸಾರ ಮುಂದಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದೆಂದು ಸೂಚಿಸಲಾಗಿದೆ.

(ವಿ. ಅನ್ಬುಕುಮಾರ್, ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು/
ಶಿಸ್ತುಪಾಲನಾಧಿಕಾರಿಗಳು